# ಭಾಗ್ಯಲಕ್ಷ್ಮೀ ಬಾರಮ್ಮ...

**ವರಮಹಾಲಕ್ಷ್ಮಿ ಹಬ್ಬದ ಆಚರಣೆ ವಿಭಿನ್ನವಾದದ್ದು. ಲಕ್ಷ್ಮಿಯ ಪ್ರತಿಮೆ ಕೂರಿಸಿ, ವ್ರತಾಚರಣೆ ಮಾಡಿ, ಪೂಜೆ ಸಲ್ಲಿಸಿ ವಿನೀತರಾಗುವ ಈ ಹಬ್ಬ ವಿಶೇಷವಾಗಿ ಮಹಿಳೆಯರಿಗೆ ಸಂಭ್ರಮ, ಸಡಗರದ ದಿನ.**

ಶ್ರಾವಣ ಮಾಸದ ಪ್ರಮುಖ ಹಬ್ಬ ವರಮಹಾಲಕ್ಷ್ಮಿ. ಎಲ್ಲರಿಗೂ ಪ್ರಿಯಳಾದ ಲಕ್ಷ್ಮಿಯ ಆರಾಧನೆ ಬಹಳ ವಿಶಿಷ್ಟವಾಗಿ ಎಲ್ಲೆಡೆ ನಡೆಯುತ್ತದೆ. ಇದಕ್ಕೆ ಕಾರಣ ಲಕ್ಷ್ಮಿ 'ರೊಕ್ಕದ ಅಧಿದೇವತೆ'. ಲಕ್ಷ್ಮಿ ಇಲ್ಲದೆ ಬದುಕೇ ಇಲ್ಲ ಎಂಬುದು ಕೂಡ ಸತ್ಯ.

ಸಾಮಾನ್ಯವಾಗಿ ಶ್ರಾವಣ ಮಾಸದ ಎರಡನೇ ಶುಕ್ರವಾರ ವರಮಹಾಲಕ್ಷ್ಮಿ ವ್ರತವನ್ನು ಆಚರಿಸಲಾಗುತ್ತದೆ. ಒಂದು ವೇಳೆ ಶ್ರಾವಣ ಮಾಸದಲ್ಲಿ ಐದು ಶುಕ್ರವಾರಗಳಿದ್ದರೆ ಮಧ್ಯದ ಶುಕ್ರವಾರ ಈ ಹಬ್ಬಕ್ಕೆ ಮೀಸಲು. ಈ ದಿನ ಲಕ್ಷ್ಮಿಯನ್ನು ಪೂಜಿಸಿದರೆ ಇಷ್ಟಾರ್ಥ ಸಿದ್ಧಿಯಾಗುತ್ತದೆ, ಅಷ್ಟೈಶ್ವರ್ಯ ಪ್ರಾಪ್ತಿಯಾಗುತ್ತದೆ ಎಂಬುದು ನಂಬಿಕೆ. ಸಾಮಾನ್ಯವಾಗಿ ಲಕ್ಷ್ಮಿ ಅಷ್ಟ ರೂಪಗಳಲ್ಲಿ ಶೋಭಿಸುತ್ತಾಳೆ. ಲಕ್ಷ್ಮೀದೇವಿಯನ್ನು ಎಂಟು ರೂಪಗಳ ಸಂಪತ್ತಿಗೆ ಹೋಲಿಸಲಾಗುತ್ತದೆ. ಜ್ಞಾನಲಕ್ಷ್ಮಿ, ಐಶ್ವರ್ಯ, ಸುಖ, ಆರೋಗ್ಯ, ಧನ, ಧಾನ್ಯ, ಜಯ, ವಿಜಯಲಕ್ಷ್ಮಿ... ಇವುಗಳು ಲಕ್ಷ್ಮಿಯ ಅವತಾರಗಳಾಗಿದ್ದು, ವರಮಹಾಲಕ್ಷ್ಮಿ ವ್ರತ ಆಚರಿಸಿದರೆ ಈ ಎಲ್ಲ ಅಷ್ಟ ಐಶ್ವರ್ಯಗಳು ಪ್ರಾಪ್ತಿಯಾಗುತ್ತದೆ ಎಂಬ ವಿಶ್ವಾಸ ಲಕ್ಷ್ಮಿ ವ್ರತ ಆಚರಿಸುವ ಮಹಿಳೆಯರದ್ದು.



## ಪೌರಾಣಿಕ ಹಿನ್ನೆಲೆ

ಲಕ್ಷ್ಮಿ ವರಮಹಾಲಕ್ಷ್ಮಿ ಆದದ್ದು ಹೇಗೆ ಎಂಬುದು ಬಹಳ ರೋಚಕ ಕಥೆ. ವರಗಳನ್ನು ದಯಪಾಲಿಸುವುದರಿಂದ ಆಕೆ ವರಮಹಾಲಕ್ಷ್ಮಿ ಎಂಬುದು ಒಂದು ಅಭಿಪ್ರಾಯ. ಒಮ್ಮೆ ದೂರ್ವಾಸ ಮುನಿಗಳ ಶಾಪದಿಂದ ಇಂದ್ರನು ರಾಜ್ಯಭ್ರಷ್ಟನಾಗಲು, ಸ್ವರ್ಗಲಕ್ಷ್ಮಿಯೂ ಸಹ ಸ್ವರ್ಗವನ್ನು ಬಿಟ್ಟು ವೈಕುಂಠ ಸೇರುತ್ತಾಳೆ. ಆಗ ದೇವತೆಗಳೆಲ್ಲ ದುಃಖಿತರಾಗಿ ಬ್ರಹ್ಮನನ್ನು ಮುಂದಿಟ್ಟುಕೊಂಡು ವೈಕುಂಠದಲ್ಲಿರುವ ಪರಮಾತ್ಮನನ್ನು ಪ್ರಾರ್ಥಿಸಿದರು. ವಿಷ್ಣುವಿನ ಸಲಹೆಯಂತೆ ದೇವತೆಗಳು ದಾನವರೊಂದಿಗೆ ಕ್ಷೀರಸಮುದ್ರ ಮಥಿಸಿ ಅಮೃತ ಪಡೆದರು. ಹೀಗೆ ಮಥಿಸುವಾಗ ಅಲ್ಲಿ ಮಹಾಲಕ್ಷ್ಮಿ ಅವತರಿಸಿದಳು ಅಲ್ಲದೆ ಮಹಾವಿಷ್ಣುವನ್ನೇ ವಿವಾಹವಾದಳು. ಈ ದಿನವನ್ನೇ ವರಮಹಾಲಕ್ಷ್ಮಿ ಹಬ್ಬವಾಗಿ ಆಚರಿಸಿಕೊಂಡು ಬರುವ ಪರಂಪರೆ ರೂಢಿಯಾಯಿತು ಎಂಬುದು ಪೌರಾಣಿಕ ಹಿನ್ನೆಲೆ.

■ ಯು. ವೇಣೂರು

## ವ್ರತಾಚರಣೆ ಹೇಗೆ?

ನಮಗೆ ಹಬ್ಬ ಎಂದರೆ ವರಮಹಾಲಕ್ಷ್ಮಿ ಹಬ್ಬವೇ. ದೀಪಾವಳಿ ಮನೆಮಂದಿಯೆಲ್ಲರ ದೊಡ್ಡ ಹಬ್ಬವಾದರೆ ವರಮಹಾಲಕ್ಷ್ಮಿ ಹೆಣ್ಣುಮಕ್ಕಳ ಹಬ್ಬ ಎಂದೇ ಖ್ಯಾತಿ. ಈ ಹಬ್ಬವನ್ನು ಕಳೆದ 20 ವರ್ಷಗಳಿಂದ ಪ್ರತಿವರ್ಷ ತಪ್ಪದೇ ವ್ರತ ಮಾಡುತ್ತಲೇ ಆಚರಿಸಿಕೊಂಡು ಬಂದಿದ್ದೇನೆ. ಈ ಹಬ್ಬಕ್ಕೆ ರಜೆ ಇಲ್ಲದಿದ್ದರೂ ವರ್ಷಂಪ್ರತಿ ಹಬ್ಬಕ್ಕೆ ರಜೆ ಹಾಕಿಯೇ ಆಚರಿಸುತ್ತೇನೆ' ಎಂದು ವಿವರ ನೀಡುತ್ತಾರೆ ಬೆಂಗಳೂರಿನ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುವ ಸಾಫ್ಟ್‌ವೇರ್ ಉದ್ಯೋಗಿ ಸುಜಾತಾ ಎಂ.ಆರ್.ಹಬ್ಬದ ತಯಾರಿ, ಪೂಜೆ, ಆಚರಣೆ ಬಗ್ಗೆ ಮಾಹಿತಿ ನೀಡುವ ಅವರು, 'ಹಬ್ಬದ ದಿನ ನಸುಕಿನಲ್ಲೇ ಎದ್ದು ಶುಚಿಯಾಗಿ ಹಬ್ಬದ ತಯಾರಿ ನಡೆಸುವುದು. ಈ ವರ್ಷ ಪೂಜಾ ಮುಹೂರ್ತದ ಸಮಯ ಬೆಳಿಗ್ಗೆ 6.26 ರಿಂದ 8.29 ಗಂಟೆಯವರೆಗೆ. ಪೂಜೆಯ ಮುಹೂರ್ತಕ್ಕೆ ವ್ರತಾಚರಣೆ ಆರಂಭಿಸಿ, ಸಂಕಲ್ಪ ಮಾಡಿ ಮಧ್ಯಾಹ್ನದವರೆಗೂ ಆರತಿ, ನೈವೇದ್ಯ ನಡೆಯುತ್ತದೆ. ಬೆಳಿಗ್ಗೆಯೇ ಕಲಶದಲ್ಲಿ ಅಕ್ಕಿ ತುಂಬಿಸಿ ಖರ್ಜೂರ, ಗೋಡಂಬಿ, ದ್ರಾಕ್ಷಿ, ಬಾದಾಮಿ, ಕಲ್ಲುಸಕ್ಕರೆ ಮತ್ತು ಕೆಲವು ಹಣ್ಣುಗಳನ್ನು ಇಡುವರು. ಈ ಕಲಶಕ್ಕೆ ಲಕ್ಷ್ಮೀ ಕಳಸ ಎನ್ನುತ್ತಾರೆ. ಪೂಜಾ ಸ್ಥಳವನ್ನು ಹೂವು, ಬಾಳೆಕಂದು, ಮಾವಿನೆಲೆಗಳಿಂದ ಅಲಕರಿಸುತ್ತೇವೆ' ಎನ್ನುತ್ತಾರೆ.

'ಕಲಶದ ಮೇಲೆ ಲಕ್ಷ್ಮಿಯ ಮುಖವಾಡವನ್ನಿಟ್ಟು ಅಥವಾ ತೆಂಗಿನಕಾಯಿಗೆ ಹಳದಿಯ ಹಿಟ್ಟಿನಿಂದ ಮೂಗು ಕಣ್ಣು ಕಿವಿ ಮಾಡಿ, ಒಡವೆಗಳನ್ನು ಹಾಕಿ, ಸೀರೆ ಉಡಿಸಿ ಅಲಂಕರಿಸಲಾಗುತ್ತದೆ. ಈ ಪೂಜೆಯಲ್ಲಿ ದಾರಗಳಿಗೆ ಪೂಜೆಯನ್ನು ಸಲ್ಲಿಸುವುದು ವಿಶೇಷ. ಈ ದಾರವನ್ನು 'ದೋರ' ಎಂದು ಕರೆಯಲಾಗುತ್ತದೆ. ಹೊಸದಾದ 12 ದಾರಗಳಿಗೆ 12 ಗಂಟುಗಳನ್ನು ಹಾಕಿ, ಅದನ್ನು ಸ್ವಲ್ಪ ನೀರಿನಲ್ಲಿ ನೆನೆಸಿ ಅರಿಶಿನ ಹಚ್ಚಿ ದೇವಿಯ ಪಕ್ಕದಲ್ಲಿಡಲಾಗುತ್ತದೆ. ಈ ದಾರಗಳಿಗೂ ಅರಿಶಿನ, ಕುಂಕುಮ, ಹೂವುಗಳಿಂದ ಪೂಜೆ ಮಾಡಿ ನೈವೇದ್ಯ ಮಾಡಲಾಗುತ್ತದೆ. ಪೂಜೆಯಾದ ಬಳಿಕ ಈ ದಾರವನ್ನು ಹೆಣ್ಣುಮಕ್ಕಳು ಕಂಕಣದಂತೆ ಕೈಗಳಿಗೆ ಕಟ್ಟಿಕೊಳ್ಳುವುದು ಸಂಪ್ರದಾಯ. ಕೆಲವರು ಸಂಜೆಯವರೆಗೂ ಲಕ್ಷ್ಮಿಯ ಆರಾಧನೆಯನ್ನು ಉಪವಾಸವಿದ್ದೇ ಮಾಡುತ್ತಾರೆ. ದೇವಿಗೆ ಇಷ್ಟವಾದ ಉಂಡೆ, ಚಕ್ಕುಲಿ, ಕಜ್ಜಾಯಗಳ ಸಮರ್ಪಣೆ ಇದ್ದೇ ಇರುತ್ತದೆ. ಅಲ್ಲದೆ ಸಂಜೆಯ ವೇಳೆ ಮುತ್ತೈದೆಯರಿಗೆ ಬಾಗಿನ ಕೊಡುವುದು ಕೂಡ ಅನೂಚಾನವಾಗಿ ನಡೆಯುತ್ತಾ ಬಂದಿರುವ ಪದ್ಧತಿ' ಎಂದು ಹಬ್ಬದ ಸಮಗ್ರ ಮಾಹಿತಿ ನೀಡುತ್ತಾರೆ ಅವರು.

ಮಹಿಳೆಯರು ಲಕ್ಷ್ಮೀ ಸಹಸ್ರನಾಮ ಪಠಣ ಕೂಡ ಮಾಡುತ್ತಾರೆ. ಅಲ್ಲದೆ ಲಕ್ಷ್ಮಿಗೆ ಸಂಬಂಧಿಸಿದ ಕೀರ್ತನೆಗಳನ್ನು ಹಾಡಿ, ಪೂಜೆ ಸಲ್ಲಿಸಿ, ವಿನೀತರಾಗುವ ಮಂದಿ ಲಕ್ಷ್ಮಿ ಒಲಿದಳೆಂದು ಸಂತೃಪ್ತಗೊಳ್ಳುವುದು ಕೂಡ ಭಾವನಾತ್ಮಕ ಸಂವೇದನೆಯನ್ನು ಸೂಚಿಸುವ ಆಚರಣೆಯೇ ಆಗಿದೆ. ■